ರಸ್ತೆಗಳ ಕಳಪೆ ಕಾಮಗಾರಿ

48 (234) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ತಿ ಅಥವಾ ಡಾಂಬರೀಕರಣಪಡಿಸಿದ ಒಂದೆರಡು ತಿಂಗಳುಗಳಲ್ಲಿಯೇ, ರಸ್ತೆ ಕೆಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳಪೆ ಕಾಮಗಾರಿಯಿಂದಾಗಿ ರಸ್ತೆ ಕೆಟ್ಟು ಹೋಗುವುದಾಗಿ ಸರ್ಕಾರ ಭಾವಿಸಿದೆಯೇ;

ಇ) ಹಾಗಿದ್ದಲ್ಲಿ, ಕಳಪೆ ಕಾಮಗಾರಿಯ ಬಗ್ಗೆ ಯಾರ ಮೇಲೆ ಜವಾಬ್ದಾರಿ ಹೊರಿಸಲಾಗುವುದು;

ಈ) ಕುಂದಾಪುರ ವಿಧಾನಸಭಾ ವ್ಯಾಪ್ತಿಯಲ್ಲಿ ಡಾಂಬರೀಕರಣ ಮಾಡಿದ ಲೋಕೋಪಯೋಗಿ ರಸ್ತೆಗಳಲ್ಲಿ ಕೆಟ್ಟು ಹೋಗಿರುವ ರಸ್ತೆಗಳು ಯಾವುವು;

ಉ) ಅವುಗಳನ್ನು ಯಾವಾಗ ದುರಸ್ಥಿಪಡಿಸಲಾಗುವುದು;

ಊ) ಡಾಂಬರೀಕರಣಗೊಳಿಸಲಾದ ಸದರಿ ರಸ್ತೆಗಳ ಬಿಲ್ಲು ಗುತ್ತಿಗೆದಾರರಿಗೆ ಪಾವತಿ ಮಾಡಲಾಗಿದೆಯೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಕುಂದಾಪುರ ವಿಧಾನಸಭಾ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೆಟ್ಟು ಹೋದ ರಸ್ತೆಗಳಿರುವುದಿಲ್ಲ.

ಉ) ಕುಂದಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಳೆಯಿಂದಾಗಿ ಗುಂಡಿ ಬಿದ್ದ ರಸ್ತೆಗಳನ್ನು ದುರಸ್ಥಿಪಡಿಸಲಾಗಿದೆ.

ಊ) ಡಾಂಬರೀಕರಣಗೊಳಿಸಲಾದ ಕಾಮಗಾರಿಗಳ ಬಿಲ್ಲುಗಳನ್ನು ಅನುದಾನಕ್ಕೆ ಅನುಗುಣವಾಗಿ ಪಾವತಿಸಲಾಗುತ್ತಿದೆ.

ರಾಜ್ಯ ಅರಣ್ಯಗಳಲ್ಲಿ ಕುಸಿದು ಬಿದ್ದು ಹಾಳಾಗುತ್ತಿರುವ ಮರಗಳ ಉಪಯೋಗ

50 (237) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅರಣ್ಯಗಳಲ್ಲಿ ಹಳೇ ಮರಗಳು ಬಿದ್ದು ಉಪಯೋಗಕ್ಕೆ ಬಾರದೆ ರಾಷ್ಟ್ರೀಯ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಮರಗಳು ಕುಸಿದು ಬಿದ್ದು ಹಾಳಾಗುವ ಮೊದಲೇ ಅವುಗಳನ್ನು ಪತ್ತೆ ಮಾಡಿ, ಕಾಲಮಿತಿ ಅವಧಿಯೊಳಗೆ ಸುಧಾರಣೆ ದರದಲ್ಲಿ ಬಡವರು ಮನೆ ಕಟ್ಟುವಾಗ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; ಇದರ ಬಗ್ಗೆ ಸರ್ಕಾರದ ನಿಲುವೇನು?